# ಉಬ್ಬದಿರು ಉಬ್ಬದಿರು ಎಲೆ ಮಾನವ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 88.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 227.
3. **Note:** Lyrics in both the references books above are same. Singer has followed these wordings.

ರಾಗ: ಕಾಂಭೋಜ ತಾಳ: ಝಂಪೆ

ಉಬ್ಬದಿರು ಉಬ್ಬದಿರು ಎಲೆ ಮಾನವ || ಪ ||
ಹೆಬ್ಬುಲಿಯಂತೆ ಯಮ ಬೊಬ್ಬಿಡುತ ಕಾದಿರುವ || ಅಪ ||

ಸಾಗರದ ತೆರೆಯಂತೆ ಸಾವು ಹುಟ್ಟಿರಲಾಗಿ
ಭೋಗ ಭಾಗ್ಯಗಳೆಂದು ಬಳಲಲೇಕೋ
ನಾಗಪೆಡೆ ನೆರಳಲ್ಲಿ ನಡುಗೊ ಕಪ್ಪೆಯ ರೀತಿ
ಕೂಗಿ ಚೀರಿದರೆ ನಿನ್ನಾಗ ಕೇಳುವರೆ || 1 ||

ಮಾಳಿಗೆ ಮನೆಯೆಂದು ಮತ್ತೆ ಸತಿ ಸುತರೆಂದು
ಜಾಳಿಗೆ ಧನ ಧಾನ್ಯ ಪಶುಗಳೆಂದು
ವೇಳೆ ತಪ್ಪದೆ ತಿಂಬ ಕೂಳು ತನಗುಂಟೆಂದು
ಗಾಳಿಗಿಕ್ಕಿದ ದೀಪ ಬಾಳು ಬದುಕೆಲ್ಲ || 2 ||

ಅಸ್ಥಿರದ ಭವದೊಳಗೆ ಅತಿಶಯಗಳೆಣಿಸದಲೆ
ವಸ್ತು ಇದರಲಿ ಕೇಳು ವೈರಾಗ್ಯವ
ವಿಸ್ತಾರ ಮಹಿಮ ಶ್ರೀ ಪುರಂದರವಿಠಲನ
ಸ್ವಸ್ಥ ಚಿತ್ತದಿ ನೆನೆದು ಮುಕ್ತಿ ಪಡೆ ಮನುಜ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ವಸ್ತು ಇದಿರಲಿ ಕೇಳು ವೈರಾಗ್ಯವ–ಅಭಾವ ವೈರಾಗ್ಯಕ್ಕೆ ವಿರುದ್ಧವಾದ ಮನೋಧರ್ಮ. ಏನೂ ಇಲ್ಲದಾಗ ವೈರಾಗ್ಯ ಕೇಳುವುದು ಸುಲಭ. ಆದರೆ ನಮಗೆ ಅಗತ್ಯವೆನಿಸಿದ ಎಲ್ಲ ಲೌಕಿಕ ಅಗತ್ಯಗಳು ಎದುರಿಗೆ ಸಿದ್ಧವಾಗಿದ್ದಾಗ ಅವನ್ನೆಲ್ಲ ಬಿಟ್ಟುವೈರಾಗ್ಯ ಭಾವವನ್ನು ತಾಳುವುದು.

**Classification:** Keerthane
**Ankita:** sri purandara vittala
**Location:** NA
**Category:** Jeevana Sambhodane, vairagya, mukti marga,
**Sub-Category:** huli, samurdra, marana, huttu, bhoga, Bhagya, uraga, neralu, kappe, mane, patni, putra, dhana, dhanya, govu, anna, deepa, bhava, vairagya, chitta, mukti, nara,
**Pravachana:** NA
**Explanation:** NA